ಕರ್ನಾಟಕ ವಿಧಾನಸಭೆ

ಗುರುವಾರ 26ನೇ ಡಿಸೆಂಬರ್ 2002ರಂದು

ಸದನವು ವಿಧಾನ ಸೌಧದಲ್ಲಿರುವ ವಿಧಾನಸಭೆಯ ಸಭಾಂಗಣದಲ್ಲಿ

ಬೆಳಿಗ್ಗೆ 11-00 ಗಂಟೆ ಸಮಾವೇಶಗೊಂಡಿತು.

ಅಧ್ಯಕ್ಷರು (ಎಂ.ವಿ. ವೆಂಕಟಪ್ಪ) ರವರು ಪೀಠವನ್ನು ಅಲಂಕರಿಸಿದ್ದರು.

1. ಬಿ.ಜೆ.ಪಿ ಸದಸ್ಯರಿಂದ ಧರಣಿ

(ಸದನ ಆರಂಭವಾಗುತ್ತಿದ್ದಂತೆ ಬಿ.ಜೆ.ಪಿ. ಸದಸ್ಯರುಗಳು ಸರ್ಕಾರದ ವಿರುದ್ಧ ಧಿಕ್ಕಾರವನ್ನು ಕೂಗಲಾರಂಭಿಸಿದರು. ಮಾನ್ಯ ಸದಸ್ಯರಾದ ಶ್ರೀ ಸಿ. ಗುರುಸ್ವಾಮಿಯವರು ಸದನದ ಬಾವಿಯಲ್ಲಿ ನಿಂತು "ನಾಗಪ್ಪನವರ ಅಪಹರಣ ಮತ್ತು ಹತ್ಯೆ ಬಗ್ಗೆ ಸಿ.ಬಿ.ಐ. ತನಿಖೆಯಾಗಬೇಕು" ಎನ್ನುವ ಘೋಷಣಾ ವಾಕ್ಯವನ್ನೊಳಗೊಂಡ ಭಿತ್ತಿಪತ್ರವನ್ನು ಹಿಡಿದು ಧರಣಿ ನಿರತರಾಗಿದ್ದರು)

(INTERRUPTIONS)

Mr. Speaker :- Under Rule 347, "The Speaker may, direct any number whose conduct is, in his opinion grossly disorderly to withdraw immediately from the House, and any member so ordered to withdraw shall do so forthwith and shall absent himself during the remainder of the days sitting" ಕಳೆದ ಮೂರು ದಿವಸಗಳಿಂದ ನಾನು ಇವರ ವರ್ತನೆಯನ್ನು ನೋಡುತ್ತಿದ್ದೇನೆ, ಇವರ ವರ್ತನೆ ನೋಡುತ್ತಿದ್ದರೆ ಇವರು ನಿಲ್ಲಿಸುವ ಪರಿಸ್ಥಿತಿಯಲ್ಲಿಲ್ಲ ಹಾಗೂ ಸದನದ ಕಾರ್ಯಕಲಾಪಗಳನ್ನು ನಡೆಸಲು ಸಹಕರಿಸುವಂತೆ ಕಾಣುತ್ತಿಲ್ಲ. ಆದಕ್ಕೋಸ್ಕರ ಇವರನ್ನು ಈ ಸೆಷನ್ ಪೂರಾ ಮುಗಿಯುವವರೆಗೂ, ಅಂದರೆ ಈ ತಿಂಗಳ 31ನೇ ತಾರೀಖಿನವರೆಗೂ ಸಭೆಯಿಂದ ಹೊರಗೆ ಇಡಬೇಕು ಎಂಬ ನಿರ್ಧಾರಕ್ಕೆ ಬಂದಿದ್ದೇನೆ. Therefore, under Rule 347, I have suspended all the members of the BJP and also other members who are participating in the Dharma I ask them to withdraw, otherwise ನಮ್ಮ ಮಾರ್ಷಲ್‌ರವರು ಬಂದು ತಮ್ಮನ್ನು ಆಚೆಗೆ ಕಳುಹಿಸಬೇಕಾಗುತ್ತದೆ. (ಬಿ.ಜೆ.ಪಿ ಸದಸ್ಯರುಗಳು ಸದನದ ಬಾವಿಗೆ ಬಂದು ಸರ್ಕಾರದ ವಿರುದ್ಧ ಧಿಕ್ಕಾರದ ಘೋಷಣೆಗಳನ್ನು ಮಾಡುತ್ತಿದ್ದ ಕಾರಣ ಅಧ್ಯಕ್ಷರ ಅಪ್ಪಣೆ ಮೇರೆಗೆ ಮಾರ್ಷಲ್‌ರವರು ಹಾಗೂ ಅವರ ಸಿಬ್ಬಂದಿ ವರ್ಗ ಸದನಕ್ಕೆ ಬಂದು ಬಿ.ಜೆ.ಪಿ ಸದಸ್ಯರುಗಳನ್ನು ಹಾಗೂ ಶ್ರೀ ಸಿ. ಗುರುಸ್ವಾಮಿಯವರನ್ನು ಸದನದಿಂದ ಹೊರಕ್ಕೆ ಕಳುಹಿಸಿದರು)

(ಗೊಂದಲ)

ಶ್ರೀ ಸಿ. ಚೆನ್ನಿಗಪ್ಪ : ಇದು ಅನ್ಯಾಯದ ಪರಮಾವಧಿ.

(ಗೊಂದಲ)

ಅಧ್ಯಕ್ಷರು : ಯಾರ್ಯಾರು ಇದರಲ್ಲಿ ಪಾರ್ಟಿಸಿಪೇಟ್ ಮಾಡುತ್ತಾರೆ, ಅವರೆಲ್ಲರನ್ನು ಹೊರಗೆ ಹಾಕಿ.

ಅಧ್ಯಕ್ಷರು : ಪ್ರಜಾಪ್ರಭುತ್ವದಲ್ಲಿ ಬಹುಶಃ ನಂಬಿಕೆ ಇಲ್ಲದೆ ಇರುವವರು ಅಥವಾ ರಾಜ್ಯಾಂಗದತ್ತವಾದ ಇಂತಹ ಮಹತ್ವವಾದ ಸಭೆಯಲ್ಲಿ ಗಂಭೀರವಾಗಿ ಮಾತನಾಡಿ ಏನೇ ವಿಷಯಗಳಿದ್ದರೂ ಕೂಡ ಚರ್ಚೆ ಮಾಡಿ, ನಂತರ ಅದನ್ನು ಇತ್ಯರ್ಥಪಡಿಸಿಕೊಳ್ಳಬೇಕೇ ಹೊರತು ಬಿ.ಜೆ.ಪಿ. ಸದಸ್ಯರು ಈ ರೀತಿ ಮಾಡುತ್ತಾರೆಂದು ನಾನು ನಂಬಿರಲಿಲ್ಲ. ಇದನ್ನು ನಾನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಈ ಮೂರು ವರ್ಷಗಳ ಕಾಲ ನಾನು ಸಭಾಧ್ಯಕ್ಷನಾದ ಮೇಲೆ ಹಾಗೂ 28 ವರ್ಷಗಳ ಹಿಂದೆ ನಾನು ವಿಧಾನಪರಿಷತ್ತಿನ ಚೇರ್‌ಮನ್ ಆಗಿದ್ದಾಗ ಕೂಡ ಯಾವತ್ತು ಇಂತಹ ಪರಿಸ್ಥಿತಿ ಬಂದಿರಲಿಲ್ಲ. ಇವತ್ತು ಈ ವಿಚಾರವನ್ನು ಬಹಳ ವಿಷಾದದಿಂದ ಹೇಳಬೇಕಾಗುತ್ತದೆ. ಇನ್ನು ಮುಂದೆಯಾದರೂ ಅವರು ಸರಿಪಡಿಸಿಕೊಳ್ಳದೇ ಇದ್ದರೆ there is no other option except what I did today. That's all I can say.

†ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) : ಮಾನ್ಯ ಅಧ್ಯಕ್ಷರೆ, ಅನಿವಾರ್ಯವಾಗಿ ಇಂತಹ ದುಃಖಕರವಾದಂತಹ, ಸಂಕಟಕರವಾದಂತಹ ನಿರ್ಣಯವನ್ನು ತಾವು, ನಮ್ಮ ಮತ್ತು ಇತರ ಸದಸ್ಯರ ಕೋರಿಕೆಯಂತೆ ತೆಗೆದುಕೊಳ್ಳಬೇಕಾಗಿ ಬಂದಿದ್ದು. ನಮ್ಮ ಜನತಂತ್ರದ ಯಶಸ್ಸಿಗೆ ಹಿಡಿದ ಒಂದು ಗ್ರಹಣ ಎಂದು ನಾನು ಭಾವಿಸುತ್ತೇನೆ. ಈ ಜನತಂತ್ರದ ಸಾರ ಏನು? ಜನತಂತ್ರದ ಒಟ್ಟು ಅರ್ಥವೇನು? ಆ ಅರ್ಥ ಚರ್ಚೆ. ಜನಗಳು, ನಮ್ಮನ್ನು ಚುನಾವಣೆ ಮಾಡಿ ಐದು ವರ್ಷಗಳ ಕಾಲ ನೀವು (ಶಾಸಕರು) ವಿಧಾನಸಭೆಯಲ್ಲಿ ಜನರ ಸಮಸ್ಯೆಗಳನ್ನು ಮಂಡಿಸಬೇಕೆಂದು ಈ ಸದನದ 224 ಸದಸ್ಯರಿಗೆ ಅವರು ಮ್ಯಾಂಡೇಟ್ ಕೊಟ್ಟಿದ್ದಾರೆ. ಆ ಮ್ಯಾಂಡೇಟ್ ಚೌಕಟ್ಟಿನಲ್ಲಿ, ತಾವು ಹಾಕಿಕೊಟ್ಟಂತಹ ಮಾರ್ಗದರ್ಶನದ ಇತಿಮಿತಿಗಳಲ್ಲಿ ನಾವು ಸರ್ಕಾರವನ್ನು ಖಂಡಿಸಬಹುದು, ಸರ್ಕಾರವನ್ನು ಟೀಕಿಸಬಹುದು, ಸರ್ಕಾರವನ್ನು ಚುಚ್ಚಬಹುದು ಅಥವಾ ಸರ್ಕಾರವನ್ನು ತೆಗೆದು ಹಾಕಲೂ ಬಹುದು. ಸರ್ಕಾರವನ್ನು ತೆಗೆದು ಹಾಕುವುದಕ್ಕೆ ಮುಕ್ತವಾದಂತಹ ಅವಕಾಶ ಇದೆ. ಆದರೆ ಎಲ್ಲಿಯವರೆಗೆ ಈ ಸದನದ ಬಹುತೇಕ ಸದಸ್ಯರುಗಳು ಈ ಸರ್ಕಾರದಲ್ಲಿ, ಈ ಮುಖ್ಯಮಂತ್ರಿಗಳಲ್ಲಿ ವಿಶ್ವಾಸವನ್ನು ವ್ಯಕ್ತಪಡಿಸುತ್ತಾರೆ ಆ ವಿಶ್ವಾಸ, ಆ ಬೆಂಬಲದಿಂದ ಈ ಸರ್ಕಾರವನ್ನು ತೆಗೆಯುವುದಕ್ಕೆ ಈ 30 ಜನರ ಕೈಲಿ ಆಗುವುದಿಲ್ಲ. ಒಟ್ಟು ಅವರು 42-44 ಜನ ಈ ಸದನದ ಒಳಗೆ ಬಂದರು. ಇವತ್ತು ಮಾನ್ಯ ಬಿ.ಬಿ ಶಿವಪ್ಪನವರು, ಹಾಗೂ ಮತ್ತೆಕೆಲವರು ಇಂತಾದ್ದೆಲ್ಲಾ ನೋಡಿ, ಅನುಭವಿಸಿ, ಹಿಂಸೆ ಸಹಿಸಲಾರದೆ ಹೊರಗಡೆ ಬಂದಿರಿ, ಈಗ ಅಲ್ಲಿ ಕಂಗೊಳಿಸುತ್ತಿದ್ದೀರಿ, ರಾರಾಜಿಸುತ್ತಿದ್ದೀರಿ. ನನಗೆ ಈರ್ಷ್ಯೆ ಇಲ್ಲ. ಆದರೆ ನನಗೆ ಒಂದು ಯೋಚನೆ ಏನು ಹೊಳೆದು ಬರುತ್ತದೆ ಎಂದರೆ ಕೇಂದ್ರ ಸರ್ಕಾರದಲ್ಲಿ ಇವರು ಒಂದು coalition Government ನಡೆಸುತ್ತಿದ್ದಾರೆ. ಮತ್ತು ಈಗಾಗಲೇ ಒಂದು ನಿರ್ಣಯವನ್ನು ಎಲ್ಲಾ ರಾಜಕೀಯ ಪಕ್ಷದವರು ತೆಗೆದುಕೊಂಡಿದ್ದಾರೆ. ಅದೇನೆಂದರೆ ಬಾವಿಗೆ ಬರುವುದಾಗಲೀ ಸ್ಲೋಗನ್ ಕೂಗುವುದಾಗಲೀ ಮಾಡಬಾರದೆಂದು. ಪ್ರಿಸೈಡಿಂಗ್ ಆಫೀಸರ್ಸ್ ಕಾನ್‌ಫರೆನ್ಸ್‌ನಲ್ಲಿ ನಾನು ಭಾಗಿಯಾಗಿರಲಿಲ್ಲ. ತಾವು ಮತ್ತು ಇತರ ನಮ್ಮ ವಿರೋಧಪಕ್ಷದ ನಾಯಕರು ಸೇರಿದ್ದರು ಎಂದು ನಾನು ಭಾವನೆ ಮಾಡುತ್ತೇನೆ. ಒಟ್ಟಾರೆ ಒಂದು ನಿರ್ಣಯವನ್ನು ಮಾಡಿದ್ದೇವೆ. ಸ್ಲೋಗನ್ ಕೂಗುವುದಾಗಲೀ ಸಭೆಯ ಕಾರ್ಯಕಲಾಪಕ್ಕೆ ನಿರ್ಣಯಕವಾದಂತಹ ಅಡ್ಡಿಯಾಗುವುದಾಗಲೀ

ಇದು ಜನತಂತ್ರಕ್ಕೆ ಎಸಗುತ್ತಿರುವಂತಹ ಅಪಚಾರ. ಅಂದಮೇಲೆ ಇವರಿಗೆ ಜನತಂತ್ರದ ಮೇಲೆ ನಂಬಿಕೆ ಇಲ್ಲ. ಆದುದರಿಂದ ನಾವು ಆಗಿಂದ್ದಾಗ್ಗೆ ಇವರು ಫ್ಯಾಸಿಸ್ಟ್ ಶಕ್ತಿಗಳನ್ನು ಪ್ರತಿನಿಧಿಸತಕ್ಕಂತಹವರು ಎಂದು ಆಗಿಂದ್ದಾಗ್ಗೆ ನಾನು ಹೇಳಬೇಕಾಗಿದ್ದರೆ ಕಾರಣ, ಇವರ ವರ್ತನೆ ಕಳೆದ ಎರಡು ದಿವಸಗಳಿಂದ ಆ ರೀತಿ ಇದೆ. ಮಾನ್ಯ ಅಧ್ಯಕ್ಷರೆ, ತಮ್ಮ ಮನಸ್ಸಿಗೆ ಬಹಳ ನೋವಾಗಿದೆ. ಏಕೆಂದರೆ ಬಹಳ ವರ್ಷಗಳಿಂದ ಸಾರ್ವಜನಿಕ ಜೀವನದಲ್ಲಿ ಇರತಕ್ಕಂಥ ನಾವು, ಶ್ರೀಮಾನ್ ಸಿಂಧ್ಯಾ, ಬೈರೇಗೌಡರು ಸೋಮಶೇಖರ್, ಎ.ಬಿ. ಪಾಟೀಲ್ ಶಿವಪ್ಪನವರು ಚೆನ್ನಿಗಪ್ಪನವರು ಹಾಗೂ ಇತರರೆಲ್ಲರಿಗೂ ಕೂಡ ಬೇಜಾರಾಗಿದೆ. ಇದು ಯಾರಿಗೂ ಹರ್ಷ ತರತಕ್ಕಂಥ ವ್ಯವಹಾರ ಅಲ್ಲ. ನಮ್ಮ ಜನತಾ ದಳದ ನಾಯಕರಿಗೆ ಹೇಳುವುದಾದರೆ, ಅವರು ತೋರಿಸಿದಂತಹ ಮುತ್ಸದ್ದಿತನ, ನೀವು ತೋರಿಸಿದಂತಹ ಪ್ರಜಾಪ್ರಭುತ್ವದ ಬಗ್ಗೆ ನಿಮಗೆ ಇರತಕ್ಕಂಥ ಆಳವಾದಂತಹ ನಂಬಿಕೆ ಮತ್ತು ಗೌರವ, ಆ ಗೌರವದ ಕಾರಣವೇ ನೀವು ಇಂತಹ disruptive tendencies ಏನಿವೆ, ಅದರಲ್ಲಿ ತಾವು ಭಾಗಿಯಾಗದೆ ಇರುವುದು ನಮ್ಮ ಸುಯೋಗ ಎಂದು ನಾನು ಭಾವನೆ ಮಾಡುತ್ತೇನೆ. ಇದು ಪ್ರಜಾಸತ್ತೆಗೆ ಮೆರುಗು ತರತಕ್ಕಂಥ ವರ್ತನೆ ಎಂದು ಈ ದಿವಸ ಹೇಳಬೇಕಾಗಿದೆ. ಇವತ್ತು ಮಾಧ್ಯಮಗಳು ಎಡಿಟೋರಿಯಲ್‌ನಲ್ಲಿ ಬರೆದಿದ್ದಾರೆ. ಅದನ್ನು ಬರೆದಾಗ, ಶಾಸನ ಸಭೆಗಳು ಗರಡಿ ಮನೆಗಳಾಗುವುದಕ್ಕೆ ಆಗುವುದಿಲ್ಲ. ಅರ್ಥಪೂರ್ಣ ಚರ್ಚೆಗೆ ಅದು ಒಂದು ಅವಕಾಶವನ್ನು ಕೊಡಬೇಕೆಂದು ಅವರು ಹೇಳಿರತಕ್ಕಂಥಾದ್ದನ್ನು ಈ ಸಭೆಯ ಗಮನಕ್ಕೆ ನಾನು ಬಹಳ ಗೌರವದಿಂದ ತರುವುದಕ್ಕೆ ಇಚ್ಛಿಪಡುತ್ತೇನೆ. ಬಹಳ ಗಹನವಾದಂತಹ ವಿಚಾರಗಳು ಇವೆ. ಮೇಲ್ಮನೆಯಲ್ಲಿ ಚರ್ಚೆ ಪ್ರಾರಂಭವಾಗಿದೆ. ಈ ಮನೆಯ ಚರ್ಚೆಯನ್ನು ನಾನು ಎದುರು ನೋಡುತ್ತಿದ್ದೇನೆ. ನಾಗಪ್ಪನವರ ಅಂತಿಮ ದುರಂತ, ಅದರ ಬಗ್ಗೆ ಸರ್ಕಾರ ಎರಡು ಮೂರು ದೃಷ್ಟಿ ಕೋನಗಳಿರುತ್ತವೆ. ಸರ್ಕಾರ ಎಲ್ಲಿ ತಪ್ಪು ಮಾಡಿತು ಎನ್ನುವುದನ್ನು ಹೇಳುವ ಉದ್ದೇಶದಿಂದಲೇ ಈ ಸದನ ಕರೆದಿದ್ದು. ಇದರ ಬಗ್ಗೆ ಮುಕ್ತವಾದಂತಹ ಚರ್ಚೆಯಾಗಬೇಕು. ಜೊತೆಗೆ ಫಾರೆಸ್ಟ್‌ದ್ದು ಒಂದು ಜ್ವಲಂತ ಸಮಸ್ಯೆ ಇದೆ. ಹಾಗೆನೇ ಸಿಇಟಿ ಸಹ ಒಂದು ಜ್ವಲಂತ ಸಮಸ್ಯೆಯಾಗಿದ್ದು ಪರಿವರ್ತನೆಯಾಗುತ್ತಿದೆ. ಹಾಗೆ ಇನ್ನೂ ಹೆಚ್ಚಿನ ವಿಚಾರ ಇದ್ದು, ಅದು ಕಾವೇರಿ ವಿಚಾರ ಇರಬಹುದು, ಅದು ಆಗಿಹೋಗಿದೆ. ಆದರೂ ಕೂಡ ಅದರ ಬಗ್ಗೆ ನಾವು ಚರ್ಚೆ ಮಾಡಬಹುದು. ಆ ಚರ್ಚೆಗೆ ನಾವೂ ಕೂಡ ಸಿದ್ಧರಿದ್ದೇವೆ. ಆದುದರಿಂದ ಇನ್ನು ಉಳಿದಿರತಕ್ಕಂಥ ಮೂರ್ನಾಲ್ಕು ದಿವಸಗಳಲ್ಲಿ ನಾವು ಮತ್ತು ಇತರ ಸದಸ್ಯರುಗಳು ಈ ಚರ್ಚೆಯಲ್ಲಿ ಭಾಗವಹಿಸಿ ಈ ಪ್ರಜಾಪ್ರಭುತ್ವದ ಒಟ್ಟಾರೆ ಮೌಲ್ಯಗಳನ್ನು ಎತ್ತಿಹಿಡಿಯುವುದಕ್ಕೆ ತಾವು ಸಹಕಾರಿಯಾಗಬೇಕು ಎಂದು ಹೇಳಿ, ಈ ಮಾತುಗಳನ್ನು ನೊಂದಿರತಕ್ಕಂಥ ತಮಗೆ ಮತ್ತು ಅಷ್ಟೇನೊಂದಿರತಕ್ಕಂಥ ಬಹಳ ಜನ ಸದಸ್ಯರು ಇದ್ದಾರೆ, ಯಾರಿಗೂ ಸಮಾಧಾನ ಇಲ್ಲ. ಇಂತಹ ಬೆಳವಣಿಗೆ ಆಗಬಾರದಿತ್ತು, ನಾನು ತಮ್ಮ ಸ್ಥಾನದಲ್ಲಿ ಮೂರು ವರ್ಷ ಕುಳಿತಿದ್ದೆ, ಹಾಗೆನೇ, ನನ್ನ ಗೆಳಯರಾದಂತಹ ಸಂಸದೀಯ ವ್ಯವಹಾರಗಳ ಸಚಿವರು ಕೂಡ ಅಲ್ಲಿ ಕುಳಿತಿದ್ದರು, ನಮ್ಮ ಫಾರೆಸ್ಟ್ ಮಿನಿಸ್ಟರ್ ಕೂಡ ಕುಳಿತಿದ್ದರು. ನಾವೆಲ್ಲರೂ ನಾನಾ ಗರಡಿಗಳಲ್ಲಿ ಪಳಗಿ ಇಲ್ಲಿ ಒಂದೊಂದು ಸ್ಥಾನದಲ್ಲಿ ಆಕಸ್ಮಿಕವಾಗಿ ಬಂದು ಕುಳಿತಿದ್ದೇವೆ, ನಾಳೆ ಇನ್ಯಾರಾದರೂ ಬರಬಹುದು. ಆದರೆ ನಾವು ಈ ರಾಜ್ಯದ ಜನತೆಗೆ

ಕಳುಹಿಸುವ ಸಂದೇಶವೇನೆಂದರೆ, ಯಾರನ್ನೇ ನೀವು ಚುನಾವಣೆ ಮಾಡಿ, ಆದರೆ ಯಾರಿಗೆ ಜನತಂತ್ರದ ಬಗ್ಗೆ ವಿಶ್ವಾಸವಿದೆ, ಜನತಂತ್ರದ ಮೌಲ್ಯಗಳ ಬಗ್ಗೆ ಗೌರವವಿದೆ ಅಂತಹವರನ್ನು ಮಾತ್ರ ಕಳುಹಿಸಬೇಕು ಎನ್ನುವ ಒಂದು ವಿಶೇಷ ಸಂದೇಶವನ್ನು ಮಾತ್ರ ನಾವು ಕೊಡಬಹುದು.

ಅಧ್ಯಕ್ಷರು : ಈಗ ಮೊದಲು ಪ್ರಶ್ನೋತ್ತರ ವೇಳೆ.

†ಶ್ರೀ ಪಿ.ಜಿ.ಆರ್. ಸಿಂಧ್ಯಾ (ಕನಕಪುರ) : ಮಾನ್ಯ ಅಧ್ಯಕ್ಷರೆ, ತಾವು ಈ ದಿವಸ ತೆಗೆದುಕೊಂಡಿರುವ ಕ್ರಮ ಬಗ್ಗೆ ನಮಗೂ ಕೂಡ ದುಗುಡವಿದೆ. ಮಾನ್ಯ ಮುಖ್ಯಮಂತ್ರಿಗಳು ಹೇಳಿದ ಹಾಗೆ ಪ್ರಜಾತಂತ್ರದ ವ್ಯವಸ್ಥೆಯಲ್ಲಿರುವ ಈ ಮನೆ, ಚರ್ಚೆಯ ಮನೆಯಾಗಬೇಕು. ಆದರೆ ನನಗೆ ಅನ್ನಿಸುತ್ತದೆ, ಸದಸ್ಯರುಗಳನ್ನು ಹೊರಗಡೆಗೆ ಹಾಕತಕ್ಕಂಥ ಕ್ರಮ ತಮ್ಮ ಕೊನೆಯ ತೀರ್ಮಾನವಾಗಬೇಕು ತಮ್ಮ ಸ್ಥಾನದಿಂದ ಎಂದು ನಾನಾದರೂ ಕೂಡ ಭಾವಿಸಿಕೊಂಡಿದ್ದೇನೆ. ನಮ್ಮ ಗೌರವಾನ್ವಿತ ಸದಸ್ಯರುಗಳು ಹಾಗೂ ಅಧಿಕೃತ ವಿರೋಧಪಕ್ಷ ನಾಯಕರು ಯಾವ ಕಾರಣದಿಂದ ಇದನ್ನು ಮಾಡಿದರೆಂಬುದನ್ನು ಅವರನ್ನು ಕರೆಯಿಸಿ ನಿಮ್ಮ ಕೊಠಡಿಯಲ್ಲಿ ಮತ್ತೊಮ್ಮೆ ಚರ್ಚೆ ಮಾಡ ಬಹುದಾಗಿತ್ತೆನೋ ಎಂದು ನನ್ನ ಮನಸ್ಸಿಗಾದರೂ ಅನ್ನಿಸುತ್ತದೆ. ಆದರೆ ಮುಖ್ಯಮಂತ್ರಿಗಳು ಹೇಳಿದ ಹಾಗೆ ಇದರ ಬಗ್ಗೆ ನಮಗ್ಯಾರಿಗೂ ಸಮಾಧಾನವಿಲ್ಲ, ಇವತ್ತು ನಾವು ಸಾಕಷ್ಟು ಅಳತಕ್ಕಂಥ ಸ್ಥಿತಿಯಲ್ಲೂ ಕೂಡ ನಾವಿಲ್ಲ. ಅಂಥ ಒಂದು ವೈಯಕ್ತಿಕವಾದ, ತುಂಬಲಾರದಂಥ ವೈಯಕ್ತಿಕ ನಷ್ಟದಲ್ಲಿ ನಾವೆಲ್ಲರೂ ಕೂಡ ಇಲ್ಲಿ ಇದ್ದೇವೆ. ಇಂತಹ ಸಂದರ್ಭದಲ್ಲಿ ಚರ್ಚೆ ಮಾಡುತಕ್ಕಂಥದರ ಬಗ್ಗೆ ಇವರು ಧರಣಿ ಮಾಡುತ್ತಿರುವುದರ ಬಗ್ಗೆ ನನಗನ್ನಿಸುತ್ತದೆ, ಹಿರಿಯ ಅಕ್ಕನ ಚಾಳಿ ಮನೆಮಂದಿಗೆಲ್ಲಾ ಎನ್ನುವ ಬುದ್ಧಿ ಅವರದು ಎಂದು ನಾನು ತಿಳಿದುಕೊಂಡಿದ್ದೇನೆ. ಏಕೆಂದರೆ ಅವರು ಲೋಕಸಭೆಯಲ್ಲಿ ಹೇಗೆ ಚರ್ಚೆ ನಡೆಯುತ್ತಿದೆ ಎಂದು ನೋಡುತ್ತಿದ್ದಾರೆ, ಬೇರೆ ಬೇರೆ ವಿಧಾನಸಭೆಗಳಲ್ಲಿ ಹೇಗೆ ನಡೆಯುತ್ತಿದೆ ಎಂಬುದನ್ನು ನೋಡುತ್ತಿದ್ದಾರೆ. ಇವತ್ತು ಮಾನ್ಯ ಮುಖ್ಯಮಂತ್ರಿಗಳದು ನಲವತ್ತು ವರ್ಷಗಳ ಅನುಭವ ತಮ್ಮದು, ರಾಷ್ಟ್ರೀಯ ಪಕ್ಷದವರೆನಿಸಿಕೊಂಡವರು ಲೋಕಸಭೆನಲ್ಲಿ ಹೇಗೆ ನಡವಳಿಕೆಗಳನ್ನು ನಡೆಸುತ್ತಿದ್ದಾರೆಂಬುದನ್ನು ತಾವು ವಿಚಾರ ಮಾಡಿ. ಮಾನ್ಯ ಲೋಕಸಭಾ ಅಧ್ಯಕ್ಷರಾದಂಥ ದಿವಂಗತ ಶಿವಬಾಲಯೋಗಿಯವರು ಬದುಕಿದ್ದಂಥ ಸಂದರ್ಭದಲ್ಲಿ ನಮ್ಮನ್ನೆಲ್ಲಾ ಕರೆಯಿಸಿ ನಿರ್ಣಯಗಳನ್ನು ಮಾಡಿದರು, ಪ್ರಧಾನಿಗಳಿದ್ದರು, ಉಪ ಪ್ರಧಾನಿಗಳಿದ್ದರು, ವಿರೋಧಪಕ್ಷದ ನಾಯಕರಿದ್ದರು, ಎಲ್ಲರೂ ಭಾಷಣ ಮಾಡಿದರು. ಆದರೆ ರಾಷ್ಟ್ರೀಯ ಅದು ಭಾರತೀಯ ಜನತಾ ಪಕ್ಷವಾಗಿರಲೀ ಕಾಂಗ್ರೇಸ್ ಪಕ್ಷವಾಗಿರಲೀ ಇವತ್ತು ಲೋಕಸಭೆಯಲ್ಲಿ ಹಾಗೂ ವಿಧಾನಸಭೆಗಳಲ್ಲಿನ ನಡವಳಿಕೆಗಳನ್ನು ನೋಡಿದಾಗ ನಮ್ಮ ಮನಸ್ಸಿಗೆ ನಿಜವಾಗಿಯೂ ಕೂಡ ನೋವಾಗುತ್ತದೆ, ಯಾವುದೇ ಪಕ್ಷಗಳು ಇದರಿಂದ ಹೊರತಾಗಿಲ್ಲ, ಇದಕ್ಕೆ ಒಂದು ಕಾರಣವೂ ಕೂಡ ಇದೆ. ಸರ್ಕಾರಗಳು ತಾವು ಹೇಳುದೇ ಸರಿ ಎನ್ನುವ ದೃಷ್ಟಿಕೋನವನ್ನು ಇಟ್ಟುಕೊಂಡಿದ್ದೂ ಕೂಡ ಇದಕ್ಕೆ ಕಾರಣವೆಂದು ನಾನು ತಿಳಿದಿದ್ದೇನೆ. ಅದೇನೆ ಆಗಿರಲಿ, ನೀವು ಅವರನ್ನು ಹೊರಗಡೆಗೆ ಹಾಕಿರುವ ಕ್ರಮ ನಿಮಗೂ ಅಧ್ಯಕ್ಷರಿಗೂ ಮತ್ತು ಅವರಿಗೂ ಸಂಬಂಧಪಟ್ಟ ವಿಷಯ. ನಾವೊಂದು ವಿರೋಧಪಕ್ಷವಾಗಿ ಅವರ ಜೊತೆಯಲ್ಲಿ ಅವರ ಭಾವನೆಗಳನ್ನು ಅರ್ಥ ಮಾಡಿಕೊಂಡಿದ್ದೇವೆ, ನನಗನ್ನಿಸುತ್ತದೆ,

ಮಾನ್ಯ ಅಧ್ಯಕ್ಷರೆ, ಅವರನ್ನು ಮತ್ತೊಮ್ಮೆ ಕರೆದು ಚರ್ಚೆ ಮಾಡಿ, ಅವರನ್ನು ಹೊರಗಡೆ ಹಾಕುವಂತಹ ಕಠಿಣ ಕ್ರಮವನ್ನು ನಂತರ ತೆಗೆದುಕೊಳ್ಳ ಬಹುದಾಗಿತ್ತೇನೋ ಎನ್ನುವ ಅಭಿಪ್ರಾಯ ಈ ವಿಚಾರದಲ್ಲಿ ನನ್ನದಾಗಿರುತ್ತದೆ.

ಅಧ್ಯಕ್ಷರು : ನಿನ್ನೆ ಕರೆಯಿಸಿದ್ದೆವು ಅವರು ಬರಲಿಲ್ಲವಲ್ಲಾ.

†ಶ್ರೀ ಪಿ. ಬೈರೇಗೌಡ (ವೇಮಗಲ್) : ಮಾನ್ಯ ಅಧ್ಯಕ್ಷರೆ, ವಿರೋಧಪಕ್ಷದ ನಾಯಕರನ್ನು ಹೊರಗೆ ಹಾಕಿರುವಂತಹ ಕಠಿಣವಾದ ಕ್ರಮವನ್ನು ಏನು ತೆಗೆದುಕೊಂಡಿದ್ದೀರಿ ಅದನ್ನು ಈ ನಾಗಪ್ಪನವರ ವಿಚಾರದ ಮಟ್ಟಿಗೆ ಮಾತ್ರ ತೆಗೆದುಕೊಂಡಿದ್ದಿರೋ ಇಲ್ಲವೋ ಈ ಅಧಿವೇಶನ ಮುಗಿಯುವರೆಗೆ ಅವರನ್ನು ಹೊರಗೆ ಹಾಕಲಾಗಿದೆಯೇ ಎಂಬುದನ್ನು ಸ್ಪಷ್ಟ ಮಾಡಬೇಕು. ಆಡಳಿತ ಪಕ್ಷದ ಕುರ್ಚಿಗಳೆಷ್ಟು ಭರ್ತಿಯಾಗಿರುತ್ತವೆಯೋ ಹಾಗೆ ವಿರೋಧಪಕ್ಷಗಳ ಕುರ್ಚಿಗಳು ಭರ್ತಿ ಯಾಗಿರಬೇಕಾದಂತಹ ಅವಶ್ಯಕತೆ ಇದೆ. ಆ ಕಾರಣದಿಂದ ಈ ಕುರ್ಚಿಗಳನ್ನು ಖಾಲಿ ಇಟ್ಟು ಕೊಂಡು ನಾವು ಇಲ್ಲಿ ಕೆಲವರು ಕುಳಿತುಕೊಂಡು ಕೆಲಸ ಮಾಡುವುದು ಅಷ್ಟು ಸಮಂಜಸವೆಂದು ಅನಿಸುವುದಿಲ್ಲ. ಆ ಕಾರಣದಿಂದ ಮಾನ್ಯ ವಿರೋಧಪಕ್ಷದ ನಾಯಕರನ್ನು ತಮ್ಮ ಕೊಠಡಿಗೆ ಕರೆದು ಮತ್ತೊಂದು ಸಾರಿ ಮಾತನಾಡಬೇಕೆನ್ನುವ ಮನವಿಯನ್ನು ನಾನು ತಮ್ಮಲ್ಲಿ ಮಾಡುತ್ತೇನೆ. ಮಾನ್ಯ ಮುಖ್ಯಮುಖ್ಯಮಂತ್ರಿಗಳು ಕೆಲವೊಂದು ವಿಷಯವನ್ನು ಪ್ರಸ್ತಾಪ ಮಾಡಿದ್ದಾರೆ, ಅವರು ಹೇಳಿರುವುದನ್ನು ನಾನು ಸಂಪೂರ್ಣವಾಗಿ ಸ್ವಾಗತ ಮಾಡುತ್ತೇನೆ. ಅದೇ ಸಂದರ್ಭದಲ್ಲಿ ತಮಗೆ ತಾವೇ ಪ್ರಶ್ನೆಯನ್ನು ಹಾಕಿಕೊಳ್ಳಿ, ತಮ್ಮದು ಅಖಿಲ ಭಾರತದ ಮಟ್ಟದಲ್ಲಿ ನೂರು ನೂರೈವತ್ತು ವರ್ಷಗಳ ಚರಿತ್ರೆ ಇರುವಂತಹ ಪಕ್ಷ ತಮ್ಮ ಪಕ್ಷ, ಈ ದೇಶದ ಚರಿತ್ರೆಯನ್ನು ಬರೆಯತಕ್ಕಂಥ ಸಂಸತ್‌ನಲ್ಲಿ ನಿಮ್ಮ ಪಕ್ಷದ ವರ್ತನೆ ಕಳೆದ ಮುರ್ನಾಲ್ಕು ವರ್ಷಗಳ ಅಧಿವೇಶನಗಳಲ್ಲಿ ಯಾವ ರೀತಿಯಾಗಿತ್ತು ಎಂಬುದನ್ನು ನೋಡುತ್ತಿದ್ದೇವೆ, ಒಂದು ಅಧಿವೇಶನ ಕೂಡ ಪೂರ್ತಿಯಾಗಿ ನಡೆಯಲಿಲ್ಲ. ಒಂದು ನಿಮಿಷ ಸಂಸತ್ ಅಧಿವೇಶನ ನಡೆಯಬೇಕಾದರೆ ಕೋಟ್ಯಾಂತರ ರೂಪಾಯಿ ಹಣ ಖರ್ಚಾಗುತ್ತದೆ, ಆ ಹಣವೆಲ್ಲಾ ಯಾರದ್ದು? ಈ ಸದನದ ಅಧಿವೇಶನ ನಡೆಸಬೇಕಾದರೂ ಲಕ್ಷಾಂತರ ರೂಪಾಯಿಗಳು ಒಂದು ನಿಮಿಷಕ್ಕೆ ಖರ್ಚಾಗುತ್ತದೆ, ಈ ಹಣವೆಲ್ಲಾ ಯಾರದ್ದು? ಜನಪ್ರತಿನಿಧಿಗಳಾಗಿ ಇಲ್ಲಿ ಬಂದು ಕುಳಿತಿರತಕ್ಕಂಥ ನಾವೆಲ್ಲರೂ ಯೋಚನೆ ಮಾಡಬೇಕೆ ಬೇಡವೇ? ಸಮಯ ಬಂದಾಗ ಮಾತ್ರ ಇವತ್ತು ನೀವು ಅವರ ಬಗ್ಗೆ ಹೇಳಿದ್ದೀರಿ, ತಮ್ಮ ಅಭಿಪ್ರಾಯವನ್ನು ನಾನು ಸ್ವಾಗತ ಮಾಡುತ್ತೇನೆ. ಅದೇ ವಿಚಾರವನ್ನು ನಿಮ್ಮ ಪಕ್ಷ ಅಖಿಲಭಾರತ ಮಟ್ಟದಲ್ಲಿ, ಅದರಲ್ಲೂ ಕೂಡ ಸಂಸತ್‌ನಲ್ಲಿ ನಿಮ್ಮ ವರ್ತನೆ ಯಾವ ವಿಧದಲ್ಲಿಯೂ ಕೂಡ ಸರಿಯಾದ ವರ್ತನೆಯಲ್ಲ, ಅದು ಖಂಡನೀಯವಾದುದೆಂದು ಉದ್ದೇಶಪೂರ್ವಕವಾಗಿ ಈ ಪದವನ್ನು ಬಳಸುತ್ತಿದ್ದೇನೆ, ಅದು ಖಂಡನೀಯ. ನಮ್ಮ ನಾಯಕರಾದ ಸಿಂಧ್ಯಾರವರು ಏನು ಹೇಳಿದರೆಂದರೆ, ಹಿರಿಯ ಅಕ್ಕನ ಚಾಳಿ ಮನೆಮಂದಿಗೆಲ್ಲಾ ಎಂದು ಹೇಳಿದರು. ನೀವು ಹಾಕಿರುವಂತಹ ಮೇಲ್ಚಂಕ್ತಿ ಇವತ್ತು ಅವರು ಇಲ್ಲಿ ತೋರಿಸಿಕೊಡುತ್ತಿದ್ದಾರೆ, ಮಾಡಿದ್ದು ಉಣ್ಣೋ ಮರಾಯ, ನೀವೇನು ಮಾಡಿದಿರೋ ಅದನ್ನು ಉಣ್ಣಿಸುವುದಕ್ಕೆ ಅವರು ಸಿದ್ಧರಾಗಿದ್ದಾರೆ. ಈ ಬಗ್ಗೆ ಮೇಲಟ್ಟದಲ್ಲಿ ತಮ್ಮ ಪಕ್ಷದಲ್ಲಿ ಚರ್ಚೆಯಾಗಬೇಕಾಗುತ್ತದೆ, ಪ್ರತಿಯೊಂದು ಪಕ್ಷದಲ್ಲೂ ಕೂಡ ಚರ್ಚೆಯಾಗಬೇಕಾಗುತ್ತದೆ.

ಈ ರೀತಿಯಾದ ವರ್ತನೆಯನ್ನು ಯಾರೇ ಮಾಡಿರಲಿ, ಯಾವುದೇ ಸದನವಾಗಿರಬಹುದು, ವಿಧಾನಸಭೆ, ವಿಧಾನಪರಿಷತ್ತು, ಸಂಸತ್ ಇರಬಹುದು, ಇದು ಸರಿಯಲ್ಲ ಎನ್ನುವ ತೀರ್ಮಾನವನ್ನು ಇವತ್ತು ಜವಾಬ್ದಾರಿ ಮತ್ತು ಸಂಖ್ಯಾಬಲ ಹೆಚ್ಚಿಗೆ ಇರುವ ಪಕ್ಷಗಳು ಮೊದಲು ತೀರ್ಮಾನ ಮಾಡಬೇಕು. ಇವತ್ತು ಈ ದೇಶದ ಲೋಕಸಭೆಯಲ್ಲಿ ಎರಡನೇ ಸ್ಥಾನದಲ್ಲಿರತಕ್ಕಂಥವರು ಮತ್ತು ದೇಶದ ಆಡಳಿತವನ್ನು ನಲವತ್ತೈದು ವರ್ಷಗಳ ಕಾಲ ನಡೆಸಿರತಕ್ಕಂಥವರು ಇದನ್ನು ತಾವು ಮೊದಲು ಪಾಲಿಸಬೇಕಾದಂಥ ಅವಶ್ಯಕತೆ ಇದೆ, ಇವತ್ತು ಸಮಯಸಾಧಕತನವನ್ನು ಮೈಗೂಡಿಸಿರತಕ್ಕಂಥದ್ದನ್ನು ನಾವು ಕಾಣುತ್ತಿದ್ದೇವೆ, ಅದರ ಪ್ರತಿಫಲವೇ ಇದು ಎನ್ನುವುದನ್ನು ನಾನು ವಿನಯಪೂರ್ವಕವಾಗಿ ತಮ್ಮ ಗಮನಕ್ಕೆ ತರುತ್ತೇನೆ. ಇನ್ನು ಮುಂದಾದರೂ ನಿಮ್ಮ ಪಕ್ಷದವರಿಗೂ ಹೇಳಿ, ಅವರು ತಿದ್ದು ಕೊಳ್ಳತಕ್ಕಂಥದ್ದಕ್ಕೆ ತಾವು ಪ್ರಯತ್ನ ನಡೆಸಬೇಕು ಎನ್ನುವ ಮನವಿಯನ್ನು ನಾನು ಈ ಸಂದರ್ಭದಲ್ಲಿ ಮಾಡಿ, ಅಧ್ಯಕ್ಷರಿಗೆ ವಂದಿಸಿ ನನ್ನ ಮಾತುಗಳನ್ನು ಮುಗಿಸುತ್ತೇನೆ.

ಶ್ರೀ ವೈ.ಕೆ. ರಾಮಯ್ಯ : ಮಾನ್ಯ ಅಧ್ಯಕ್ಷರೆ, ಈಗ ನಾಗಪ್ಪನವರ ಬಗ್ಗೆ ಚರ್ಚೆ ಈ ಸದನದಲ್ಲಿ ಆರಂಭವಾಗಿದೆಯೇ ಆರಂಭವಾಗಿದ್ದರೆ ನಮಗೂ ಮಾತನಾಡಲಿಕ್ಕೆ ಅವಕಾಶ ಕೊಡುತ್ತೀರಾ?

ಅಧ್ಯಕ್ಷರು : ಅವಕಾಶವನ್ನು ಕೊಡೋಣ.

†ಶ್ರೀ ಸಿ. ಚಿನ್ನಿಗಪ್ಪ (ಕೊರಟಗೆರೆ) : ಸನ್ಮಾನ್ಯ ಅಧ್ಯಕ್ಷರೆ, ಈ ಸದನಕ್ಕೆ ನಾವೇನು 224 ಶಾಸಕರು ಗೆದ್ದು ಬಂದಿದ್ದೇವೆ, ನಾವು ಆಯಾ ಕ್ಷೇತ್ರದ ಸಮಸ್ಯೆಗಳ ಬಗ್ಗೆ ಚರ್ಚೆ ಮಾಡಿ ನಿಜವಾಗಿ ಒಂದು ಮಾರ್ಗೋಪಾಯವನ್ನು ಕಂಡುಕೊಳ್ಳಬೇಕೆಂದು ಈ ಅಧಿವೇಶನವನ್ನು ಸರ್ಕಾರ ಕರೆದು ಅತ್ಯುತ್ತಮವಾದ ಕೆಲಸವನ್ನು ಮಾಡಿದೆ, ನಾನು ಸ್ವಾಗತ ಮಾಡುತ್ತೇನೆ. ಈ ಸಂದರ್ಭದಲ್ಲಿ ಜವಾಬ್ದಾರಿಯುತರಾದ ವಿರೋಧಪಕ್ಷದ ಎಲ್ಲಾ ಸದಸ್ಯರು ಸರ್ಕಾರವನ್ನು ಚರ್ಚೆಗೆ ಅವಕಾಶ ಕೊಡಿ ಎಂದು ಕೇಳಬಹುದಾಗಿತ್ತು, ಒಂದು ವಾರದ ಚರ್ಚೆಯಲ್ಲಿ ಸರ್ಕಾರವೇನಾದರೂ ವಿಫಲತೆಯನ್ನು ಹೊಂದಿದ್ದರೆ, ಈ ಸರ್ಕಾರ ಸರಿ ಇಲ್ಲವೆಂದು ಹೇಳುವುದಕ್ಕೆ ನಮಗೆ ಅಧಿಕಾರವಿದೆ, ಜನರು ಅಧಿಕಾರವನ್ನು ಕೊಟ್ಟಿದ್ದಾರೆ. ಆ ಸಂಪ್ರದಾಯವನ್ನು ಬಿಟ್ಟು ಕಳೆದ ಎರಡು ದಿವಸಗಳಿಂದ ವಿರೋಧಪಕ್ಷದ ಕೆಲವರು ಮಾಡಿದಂತಹ ಸಂಪ್ರದಾಯ ಜನರು ಮೆಚ್ಚುವಂತಹದ್ದಲ್ಲ ಎಂದು ಹೇಳುವುದಕ್ಕೆ ಇಚ್ಛಿಪಡುತ್ತೇನೆ, ಇವತ್ತು ಕುಡಿಯುವ ನೀರಿನ ಬಗ್ಗೆ, ವಿದ್ಯುತ್ ಬಗ್ಗೆ, ನಾಗಪ್ಪನವರ ಬಗ್ಗೆ, ಕಾವೇರಿ ಬಗ್ಗೆ ಹೀಗೆ ಜ್ವಲಂತ ಸಮಸ್ಯೆಗಳು ನಮ್ಮ ರಾಜ್ಯದಲ್ಲಿದೆ, ಇದು ಕಂಡಂತ ವಿಚಾರ. ಎಲ್ಲಾ ಮಾನ್ಯ ಸದಸ್ಯರು ಅರ್ಥ ಮಾಡಿಕೊಂಡಿದ್ದಾರೆ, ನಾವು ಇಲ್ಲಿ ಬಂದು ಚರ್ಚೆ ಮಾಡಿ, ಸರ್ಕಾರವನ್ನು ಒತ್ತಾಯಿಸಿ, ಅದನ್ನು ಪರಿಹರಿಸಿಕೊಳ್ಳಬೇಕು. ಅದನ್ನು ಬಿಟ್ಟು, ಬಾವಿಯಲ್ಲಿ ನಿಂತುಕೊಳ್ಳುವುದು, ಆಚೆಗೆ ಎತ್ತಿಹಾಕುವುದು ಈ ಸಂಪ್ರದಾಯ ದಯಮಾಡಿ ಆಗಬಾರದು. ತಾವೇನು ವಿಷಾದವನ್ನು ವ್ಯಕ್ತಪಡಿಸಿದ್ದೀರಿ, ನಾವೂ ಕೂಡ ಅಂತಹ ಸಂಪ್ರದಾಯವನ್ನು ಇಲ್ಲಿ ಬೆಳಸಬಾರದೆಂಬುದು ನನ್ನ ಕಳಕಳಿ ಮಾನ್ಯ ಸಭಾಧ್ಯಕ್ಷರೆ

†ಶ್ರೀ ಬಿ. ಸೋಮಶೇಖರ್ (ಮಳವಳ್ಳಿ) : ಮಾನ್ಯ ಅಧ್ಯಕ್ಷರೆ, ತಾವೇನು ಒಂದು ನಿಲುವನ್ನು ತೆಗೆದುಕೊಂಡಿದ್ದೀರಿ ಅದರ ಬಗ್ಗೆ ನನ್ನ ಮನವಿ ಏನೆಂದರೆ, ಇದು ಬಹಳ ಕಠಿಣವಾಯಿತು ಎಂಬುದು ನನ್ನ ಅಭಿಪ್ರಾಯ. ಬಿ.ಜೆ.ಪಿ. ಯವರು ಅವರ ಹೋರಾಟ ಇರತಕ್ಕದ್ದು ನಾಗಪ್ಪನವರ

ವಿಚಾರದಲ್ಲಿ ಸರ್ಕಾರದ ವಿರುದ್ಧವಾಗಿ ಬಹಳ ಕಠಿಣವಾದ ನಿಲುವನ್ನು ತೆಗೆದುಕೊಂಡಿದ್ದಾರೆ. ಆದರೆ ತಾವು ಪುನರ್‌ಪರಿಶೀಲನೆ ಮಾಡುವುದೇನೆಂದರೆ, ಅವರನ್ನು ಈ ನಾಗಪ್ಪನವರ ವಿಚಾರ ಚರ್ಚೆಯಾಗುವರೆಗೆ ಹೊರಗಡೆ ಇಟ್ಟು, ಬೇರೆ ವಿಚಾರಗಳ ಚರ್ಚೆಯಲ್ಲಿ ಭಾಗವಹಿಸಲು ಅವರಿಗೆ ಅವಕಾಶ ಕೊಡಬಹುದು. ನಾಗಪ್ಪನವರ ವಿಚಾರ ಚರ್ಚೆ ಆದ ಮೇಲೆ ಬೇರೆ ವಿಚಾರದಲ್ಲಿ, ತಮ್ಮ ತೀರ್ಮಾನವನ್ನು ಪುನರ್ ಪರಿಶೀಲನೆ ಮಾಡಿ ಅವರನ್ನು ವಾಪಸ್ ಕರೆಸಿ ಕೊಳ್ಳತಕ್ಕಂಥದ್ದು ಸೂಕ್ತವೆನ್ನುವುದು ನನ್ನ ಒಂದು ಸಲಹೆ.

11.30 ಪಿಎಂ

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಸನ್ಮಾನ್ಯ ಸಭಾಧ್ಯಕ್ಷರೇ, ನವೆಂಬರ್ 2001ರಲ್ಲಿ ಅಖಿಲ ಭಾರತ ಮಟ್ಟದಲ್ಲಿ ದೆಹಲಿಯಲ್ಲಿ ಒಂದು ಕಾನ್ಫರೆನ್ಸ್ ಆಯಿತು. ಆಗ ದಿವಂಗತ ಜಿ.ಎಂ.ಸಿ ಬಾಲಯೋಗಿಯವರು ಲೋಕಸಭಾ ಅಧ್ಯಕ್ಷರಾಗಿದ್ದರು.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೆ, ಸಭಾನಾಯಕರು ಈಗಾಗಲೇ ಮಾತನಾಡಿದ್ದಾರೆ. ನಾಗಪ್ಪನವರ ಹತ್ಯೆಯ ಬಗ್ಗೆ ನಾವು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ಇಡೀ ರಾಜ್ಯದ ಮತ್ತು ರಾಷ್ಟ್ರದ ಗಮನ ಈ ಕಡೆ ಇದೆ. ಇಡೀ ರಾಜ್ಯ ಮತ್ತು ರಾಷ್ಟ್ರದ ಜನ ಈ ಸದನದ ಕಡೆ ನೋಡುತ್ತಿದ್ದಾರೆ. ಈಗಾಗಲೇ ಎರಡು ದಿನ ವ್ಯರ್ಥವಾಗಿದೆ. ಆದ್ದರಿಂದ, ದಯಮಾಡಿ ನಾವು ನಿಲುವಳಿ ಸೂಚನೆಯನ್ನು ಮಂಡಿಸಲು ಅವಕಾಶ ಮಾಡಿಕೊಡಬೇಕು ಎಂದು ನಾನು ತಮ್ಮಲ್ಲಿ ಬೇಡಿಕೊಳ್ಳುತ್ತಿದ್ದೇನೆ.

ಶ್ರೀ ಎಸ್.ಪಿ. ಮುದ್ದಹನುಮೇಗೌಡ : ಮಾನ್ಯ ಸಭಾಧ್ಯಕ್ಷರೇ, ಒಂದು ನಿಮಿಷ ದಯಮಾಡಿ ನನ್ನ ಅಭಿಪ್ರಾಯವನ್ನು ವ್ಯಕ್ತಪಡಿಸಲು ತಾವು ಅವಕಾಶ ಮಾಡಿಕೊಡಬೇಕು. ನವೆಂಬರ್ 2001ರಲ್ಲಿ ದಿವಂಗತ ಜಿ.ಎಂ.ಸಿ ಬಾಲಯೋಗಿಯವರು ಲೋಕಸಭಾ ಅಧ್ಯಕ್ಷರಾಗಿದ್ದಂಥ ಸಂದರ್ಭದಲ್ಲಿ ಅಖಿಲ ಭಾರತ ಮಟ್ಟದಲ್ಲಿ ಒಂದು ಕಾನ್ಫರೆನ್ಸ್ ಮಾಡಿದರು. Discipline and Decorum in the Legislature and Parliament. ಮಾನ್ಯ ವಿರೋಧ ಪಕ್ಷದ ನಾಯಕರಾದ ಜಗದೀಶ್ ಶೆಟ್ಟರ್‌ರವರು ಮತ್ತು ಅವರ ಪಕ್ಷದ ಮುಖಂಡರುಗಳು, ಮಾನ್ಯ ಸಿಂಧ್ಯಾರವರು ಮತ್ತು ಅವರ ಪಕ್ಷದ ಮುಖಂಡರುಗಳು ಮತ್ತು ಆಡಳಿತ ಪಕ್ಷದಿಂದ ಕೆಲವರನ್ನು ಆ ಕಾನ್ಫರೆನ್ಸ್‌ಗೆ ಕರೆದಿದ್ದರು. ಸದನಗಳಲ್ಲಿ ಸದಸ್ಯರಾದ ನಾವು ಯಾರ ರೀತಿ ನಡೆದುಕೊಳ್ಳಬೇಕು, ಯಾವ ರೀತಿ ಸದನವನ್ನು ನಡೆಸಬೇಕು ಎನ್ನುವ ಬಗ್ಗೆ ಅಲ್ಲಿ ದೀರ್ಘವಾದಂಥ ಚರ್ಚೆಯಾಯಿತು. ದೇಶದ ಪ್ರಧಾನ ಮಂತ್ರಿಗಳಾಗಿರತಕ್ಕಂಥ ಅಟಲ್ ಬಿಹಾರಿ ವಾಜಪೇಯಿಯವರ ನೇತೃತ್ವದಲ್ಲಿ, ಭಾರತ ದೇಶದಲ್ಲಿರುವ ಎಲ್ಲಾ ಸದನಗಳಲ್ಲಿಯೂ ನಮ್ಮದೇ ಆದಂಥ ಎಥಿಕ್ಸ್ ಕೋಡ್ ಆಫ್ ಕಂಡಕ್ಟ್ ಹಾಕಿಕೊಂಡು ಅದರಂತೆ ನಡೆದುಕೊಳ್ಳಬೇಕು ಎನ್ನುವ ಸರ್ವಾನುಮತದ ತೀರ್ಮಾನವಾಯಿತು. ಇವತ್ತು ಆ ತೀರ್ಮಾನವೇನಾಯಿತು? ಮಾನ್ಯ ವಾಜಪೇಯಿಯವರ ನೇತೃತ್ವದಲ್ಲಿ ನಡೆದಂಥ ಕಾನ್ಫರೆನ್ಸ್‌ನಲ್ಲಿ ತೆಗೆದುಕೊಂಡಂಥ ತೀರ್ಮಾನವೇನಾಯಿತು? ಅದಕ್ಕೆ ಮಾನ್ಯ ಜಗದೀಶ್ ಶೆಟ್ಟರ್‌ರವರು ಮತ್ತು ಅವರ ಪಕ್ಷದ ಮುಖಂಡರುಗಳು ಮತ್ತು ಇಡೀ ದೇಶದ cream of leaders in the country, they were all present in the Conference. What happened to those decisions taken and the resolutions made in the Conference.

ಎರಡನೆಯದಾಗಿ, ಈ ಪ್ರಜಾಪ್ರಭುತ್ವದಲ್ಲಿ ಆಡಳಿತ ಪಕ್ಷದ ಮೇಲೆ ಎಷ್ಟು ಜವಾಬ್ದಾರಿ ಇದೆಯೋ ಅಷ್ಟೇ ಜವಾಬ್ದಾರಿ ವಿರೋಧ ಪಕ್ಷಗಳ ಮೇಲೂ ಸಹ ಇದೆ. They have to play the role of the watchdog. ಈ ಸರ್ಕಾರದಲ್ಲಿರತಕ್ಕಂಥ ವೈಫಲ್ಯಗಳು, ದಿನನಿತ್ಯ ನಡೆಯತಕ್ಕಂಥ ಕಾರ್ಯಕ್ರಮಗಳಲ್ಲಿರತಕ್ಕಂಥ ಲೋಪದೋಷಗಳನ್ನು ಎತ್ತಿ ಹಿಡಿಯತಕ್ಕಂಥ ಒಂದು ಮಹತ್ತರವಾದ ಜವಾಬ್ದಾರಿಯನ್ನು ವಿರೋಧಪಕ್ಷಗಳಿಗೆ ಜನರು ಕೊಟ್ಟಿದ್ದಾರೆ. ಅವರು ಆ ಸ್ಥಾನದಲ್ಲಿ ಕುಳಿತುಕೊಂಡ ಮೇಲೆ they have to properly discharge their duties and responsiblities. ಜನರು ಅವರ ಮೇಲೆ ನಂಬಿಕೆಯನ್ನಿಟ್ಟುಕೊಂಡು, ವಿಶ್ವಾಸವನ್ನಿಟ್ಟುಕೊಂಡು ಆ ಸ್ಥಾನದಲ್ಲಿ ಕೂರಿಸಿದ್ದಾರೆ. ಆ ಜವಾಬ್ದಾರಿಯನ್ನು ಅವರು ಸರಿಯಾಗಿ ನಿರ್ವಹಿಸಲಿಲ್ಲ. ಈ ಸದನದಿಂದ ಹೊರಗೆ ಹಾಕುವಂತೆ ಸದನದ ಕಲಾಪಗಳಿಗೆ ಅಡ್ಡಿ ಪಡಿಸುವ ಕೆಲಸವನ್ನು ಮಾಡುವುದರ ಮುಖಾಂತರ ಅವರು ಜನತೆಗೆ ದ್ರೋಹ ಬಗೆದಿದ್ದಾರೆ ಎನ್ನುವ ಮಾತನ್ನು ಈ ಸಂದರ್ಭದಲ್ಲಿ ಹೇಳಲು ನಾನು ಇಷ್ಟಪಡುತ್ತೇನೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಈಗಾಗಲೇ ಹೇಳಿದ್ದೇನೆ. ನಮ್ಮ ಪಕ್ಷದ ಮತಿಯಿಂದ ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ನಿಲುವಳಿ ಸೂಚನೆ ರೂಪದಲ್ಲಿ ಚರ್ಚೆ ಮಾಡಲು ದಯಮಾಡಿ ನಮಗೆ ಅವಕಾಶವನ್ನು ಮಾಡಿಕೊಡಬೇಕು ಎಂದು ಕೇಳಿಕೊಳ್ಳುತ್ತಿದ್ದೇನೆ. ಇದು ಬಹಳ ಮಹತ್ವವಾದ ವಿಚಾರ.

Mr. Speaker : It has been converted to Rule 69.

ಶ್ರೀ ಡಿ.ಬಿ. ಚಂದ್ರೇಗೌಡ : ಸನ್ಮಾನ್ಯ ಅಧ್ಯಕ್ಷರೆ, ...

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾನು ಹೇಳುತ್ತಿದ್ದೇನೆ. ನಾನು ಮುಗಿಸಿದ ನಂತರ ಅವರು ಹೇಳಲಿ.

†ಶ್ರೀ ಡಿ.ಬಿ. ಚಂದ್ರೇಗೌಡ (ಕಾನೂನು ಸಂಸದೀಯ ವ್ಯವಹಾರಗಳ ಸಚಿವರು): ಮಾನ್ಯ ಅಧ್ಯಕ್ಷರೆ, ನಿಮ್ಮ ಸಲಹೆಗೆ ನಾವು ಉತ್ತರ ಹೇಳುತ್ತೇವೆ. ಈ ವಿಚಾರವನ್ನು ಪುನಃ ಎತ್ತಬೇಕು ಎನ್ನುವ ಉದ್ದೇಶ ನಮಗೆ ಇರಲಿಲ್ಲ. ಆದರೆ ಪ್ರತಿಪಕ್ಷದ ಹಿರಿಯ ನಾಯಕರಾದ ಶ್ರೀಮಾನ್ ಸೋಮಶೇಖರ್‌ರವರು, ಸಭಾಧ್ಯಕ್ಷರ ಕ್ರಮ ತುಂಬಾ ಕಠಿಣವಾಯಿತು ಎನ್ನುವ ಶಬ್ದವನ್ನು ಬಳಸಿದ್ದಾರೆ. ಶ್ರೀಮಾನ್ ಬೈರೇಗೌಡರು, ಅವರನ್ನು ಕರೆಸಿ ಮಾತನಾಡಿ ಎಂದು ಸಲಹೆ ಕೊಟ್ಟಿದ್ದಾರೆ. ಈ ಎರಡೂ ವಿಚಾರಗಳಲ್ಲಿ ಸರ್ಕಾರ ಮುಕ್ತವಾಗಿದೆ. ಕರೆದು ಮಾತನಾಡುವುದಕ್ಕೆ ನಮ್ಮದೇನೂ ಅಭ್ಯಂತರವಿಲ್ಲ. ಆದರೆ, ಮೊನ್ನೆ ಸಭಾಧ್ಯಕ್ಷರು ಅವರನ್ನು ಕರೆದಾಗ ಅವರು ಸಭಾಧ್ಯಕ್ಷರ ಕೊಠಡಿಗೆ ಕೂಡ ಬಾರದೇ ಇರುವುದನ್ನು ಈ ಸದನದ ಗಮನಕ್ಕೆ ತರಬಯಸುತ್ತೇನೆ. ಎರಡನೆಯದಾಗಿ, ಶ್ರೀಮಾನ್ ಸಿಂಧ್ಯಾರವರು 'ವಿರೋಧ ಪಕ್ಷಗಳನ್ನು' ಎನ್ನುವ ಪದವನ್ನು ಬಳಸಿದರು. ನಾನು ಅದಕ್ಕೆ ಒಂದು ಶಬ್ದವನ್ನು ಸೇರಿಸಬೇಕಾಗಿದೆ. ಜವಾಬ್ದಾರಿ ವಿರೋಧ ಪಕ್ಷಗಳನ್ನು ಎಂದು ಹೇಳಬೇಕಾಗಿದೆ. ಬೇಜವಾಬ್ದಾರಿಯಾಗಿ ನಡೆದುಕೊಂಡ ವಿರೋಧ ಪಕ್ಷಗಳು ಎಂದು ಹೇಳಲು ಆಗುವುದಿಲ್ಲ. ಆದ್ದರಿಂದ, ಜವಾಬ್ದಾರಿ ಇರತಕ್ಕಂಥ ವಿರೋಧ ಪಕ್ಷಗಳ ಮಾತನ್ನೇ ನೀವು ಆಡಿದ್ದೀರಿ. ನಾವು ಸಂಸದೀಯ ವ್ಯವಸ್ಥೆಯನ್ನು ಒಪ್ಪಿಕೊಂಡು, ಪಾರ್ಲಿಮೆಂಟರಿ

ಸಿಸ್ಟಂ ಆಫ್ ಡೆಮಾಕ್ರಸಿಯನ್ನು ಒಪ್ಪಿಕೊಂಡು, ಸಂವಿಧಾನದಲ್ಲಿ ಅಳವಡಿಸಿ ಅದರಂತೆ ನಡೆದುಕೊಂಡು ಬಂದಿದ್ದೇವೆ. ನಮ್ಮ ಪಕ್ಷದ ವರ್ತನೆಯೂ ಸರಿಯಾಗಿಲ್ಲ ಎಂದು ಆಪಾದನೆ ಮಾಡಿದ್ದಾರೆ. ಪರಿಸ್ಥಿತಿ ಯಾವ ಸಂದರ್ಭದಲ್ಲಿ ಹೇಗಿರುತ್ತದೋ ಹಾಗೆ ನಾವು ನಡೆದುಕೊಳ್ಳುತ್ತೇವೆ. ಆದರೆ ಇಲ್ಲಿ ನಡೆದಿರತಕ್ಕಂಥ ವಿಚಾರವೇನೆಂದರೆ, ಅವರಿಗೆ ಏನು ಬೇಕು ಎನ್ನುವುದನ್ನೇ ಅವರು ಹೇಳಲಿಲ್ಲ What exactly they want? ಅವರಿಗೆ ಸರ್ಕಾರದಿಂದ ಏನು ಬೇಕು ಎಂದು ಹೇಳಲಿಲ್ಲ. ಅವರು ಹೊರಗಡೆಯಿಂದ ಕೂಗಿಕೊಂಡು ಬಂದ್ದುದ್ದನೆಲ್ಲಾ ತಾವು ಗಮನಿಸುವುದಿಲ್ಲ. ಕಡತದಲ್ಲಿ ಏನು ಹೋಗಿರುತ್ತದೆ ಅಷ್ಟು ಮಾತ್ರ ನಮಗೆ ಗೊತ್ತಿರುತ್ತದೆ. ಅದಕ್ಕೆ ಸಂಬಂಧಪಟ್ಟಹಾಗೆ ಉತ್ತರ ಹೇಳುತ್ತೇವೆ ಆದ್ದರಿಂದ, ಭಾರತೀಯ ಜನತಾ ಪಕ್ಷದ ಗೌರವಾನ್ವಿತ ಸದಸ್ಯರು ಜವಾಬ್ದಾರಿ ವಿರೋಧ ಪಕ್ಷವಾಗಿ ಪರ್ಯಾಯ ಸರ್ಕಾರವಾಗಿ ನಡೆದುಕೊಳ್ಳಬೇಕಾಗಿತ್ತು ಮತ್ತು ಈಗಾಗಲೇ ಮಾನ್ಯ ನಾಯಕರು ಹೇಳಿದ ಹಾಗೆ ಆಗಿರತಕ್ಕಂಥ ತಪ್ಪುಗಳೇನು, ದೋಷಗಳೇನು, ಅವುಗಳನ್ನು ತಿದ್ದಿಕೊಳ್ಳುವುದು ಹೇಗೆ ಎಂದು ಸಲಹೆ, ಮಾರ್ಗದರ್ಶನಗಳನ್ನು ಮಾಡಬೇಕಾಗಿತ್ತು. ಆದರೆ, ತಮಗೆ ಏನು ಬೇಕು ಎನ್ನುವುದನ್ನು ಹೇಳದೇ ಸುಮ್ಮನೇ ಕೂಗಾಡಿ ಗಂಟಲು ಹರಿದುಕೊಂಡರೆ ಏನು ಪ್ರಯೋಜನ? ಆದ್ದರಿಂದ, ನಮಗೆ ಅದು ಏನೆಂದು ತಿಳಿಯಲಿಲ್ಲ. ಆದ್ದರಿಂದ, ತಾವು ತೆಗೆದು ಕೊಂಡಿರುವ ತೀರ್ಮಾನವನ್ನು, ಈ ಸಭೆಯನ್ನು ನಡೆಸಬೇಕು ಎನ್ನುವ ಸದಿಚ್ಛೆ ಇರತಕ್ಕಂಥ ಎಲ್ಲರೂ ಸ್ವಾಗತಿಸಿದ್ದೇವೆ. ಆ ಕ್ರಮ ಕಠಿಣವೋ, ಅಲ್ಲವೋ ಅಥವಾ ಅವರನ್ನು ಕರೆದು ಮಾತನಾಡಬೇಕೋ, ಬಿಡಬೇಕೋ ಅದು ತಮಗೆ ಸೇರಿದ್ದು. ಅದಕ್ಕೆ ಸರ್ಕಾರದಿಂದ ಯಾವ ರಿಸರ್ವೇಷನ್‌ಗಳೂ ಇಲ್ಲ. ತಾವು ಅವರನ್ನು ಕರೆದು ಮಾತನಾಡಬಹುದು. ತಮ್ಮ ಸಲಹೆಯನ್ನು ಸರ್ಕಾರ ಸ್ವಾಗತಿಸುತ್ತದೆ.

ಶ್ರೀ ಸಿ. ಬೈರೇಗೌಡ : ವಿರೋಧ ಪಕ್ಷಗಳು ಜವಾಬ್ದಾರಿಯಿಂದ ನಡೆದು ಕೊಳ್ಳಬೇಕು ಎನ್ನುವ ಮಾತನ್ನು ಹೇಳಿದಿರಿ. ಸಂಸತ್ತಿನಲ್ಲಿರತಕ್ಕಂಥ ವಿರೋಧ ಪಕ್ಷಗಳೂ ಕೂಡ ಅದರಲ್ಲಿ ಸೇರಿವೆಯೇ?

ಅಧ್ಯಕ್ಷರು : ಸಂಸತ್ತಿನ ವಿಷಯ ನಮಗೇಕೆ ಇಲ್ಲಿ?

ಶ್ರೀ ಡಿ.ಬಿ. ಚಂದ್ರೇಗೌಡ : ಎಲ್ಲವೂ ಸೇರಿವೆ. ನಮ್ಮ ಅಭಿಪ್ರಾಯವನ್ನು ಕೇಳಲು ನೀವು ತಯಾರಾಗಿಲ್ಲದಿದ್ದರೆ ಆಗ ಈ ಸ್ಥಿತಿ ಬರಬಹುದು. ನೀವು ಕೇಳುವುದಕ್ಕೇ ತಯಾರಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಕೇಳುವುದಕ್ಕೆ ತಯಾರಿದ್ದೇವೆ ಎಂದು ಈಗಾಗಲೇ ಹೇಳಿದ್ದೇವೆ.

ಶ್ರೀ ಡಿ.ಬಿ. ಚಂದ್ರೇಗೌಡ : ಬಿ.ಜೆ.ಪಿ ಯವರು ಕೇಳಬೇಕಲ್ಲಾ ಸ್ವಾಮಿ. ಅವರಿಗೆ ಏನು ಬೇಕು ಎಂದು ಅವರು ಹೇಳಲಿಲ್ಲ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಅವರದ್ದು ಆಯಿತಲ್ಲಾ ಸ್ವಾಮಿ, ಅವರನ್ನು ಹೊರಗಡೆ ಹಾಕಿದ್ದೀರಿ ನಮಗೆ ನಿಲುವಳಿ ಸೂಚನೆಗೆ ಅವಕಾಶ ಕೊಡಿ.

ಅಧ್ಯಕ್ಷರು : ನಿಲುವಳಿ ಸೂಚನೆ ಇಲ್ಲ. ಅದನ್ನು ನಿಯಮ 69ರ ಪ್ರಕಾರ ಕನ್‌ವರ್ಟ್ ಮಾಡಿದ್ದೇವೆ. ಈಗ ನಮ್ಮ ಮುಂದಿರುವ ಒಂದೇ ಒಂದು ಪ್ರಶ್ನೆ ಎಂದರೆ, ಈಗ ಪ್ರಶ್ನೋತ್ತರ ವೇಳೆ ಇದೆ.

ಶ್ರೀ ಪಿ.ಜಿ.ಆರ್. ಸಿಂಧ್ಯ : ನಾವು ನಿಲುವಳಿ ಸೂಚನೆಯನ್ನು ಕಳುಹಿಸಿದ್ದೇವೆ. ತಮ್ಮಲ್ಲಿ ಮತ್ತೊಮ್ಮೆ ಅತ್ಯಂತ ಕಳಕಳಿಯಿಂದ ಕೇಳಿಕೊಳ್ಳುತ್ತಿದ್ದೇವೆ, ನಮ್ಮ ಮನಸ್ಸಿಗೆ, ಗಾಯದ ಮೇಲೆ ಬರೆ ಹಾಕಲು ಹೋಗಬೇಡಿ. ದಯಮಾಡಿ ತಾವು ನಮ್ಮ ಮನಸ್ಸನ್ನು ಅರ್ಥಮಾಡಿಕೊಳ್ಳಿ. ನಿಲುವಳಿ ಸೂಚನೆ ಬಗ್ಗೆ, ಸರ್ಕಾರದವರು ಸ್ವತಃ, ಆಯಿತು, ನಮಗೆ ಒಪ್ಪಿಗೆ ಇದೆ ಎಂದು ಸ್ಪಂದಿಸಿ ಅದರ ಬಗ್ಗೆ ನೀವು ಚರ್ಚೆ ಮಾಡಿ ಎಂದು ಮಾನ್ಯ ಮುಖ್ಯಮಂತ್ರಿಗಳು ಹೇಳಬೇಕಾಗಿತ್ತು. ದಯಮಾಡಿ ತಾವು ನಮಗೆ ಅವಕಾಶ ಮಾಡಿಕೊಡಿ.

ಅಧ್ಯಕ್ಷರು : ಅವಕಾಶ ಮಾಡಿಕೊಡುತ್ತೇನೆ. ಇಲ್ಲ ಎಂದು ಹೇಳಿದವರು ಯಾರು?

ಶ್ರೀ ಪಿ.ಜಿ.ಆರ್. ಸಿಂಧ್ಯ : ಹಾಗಾದರೆ ಹೇಳಿ, ನಾನು ಶುರು ಮಾಡುತ್ತೇನೆ.

ಅಧ್ಯಕ್ಷರು : ದಯವಿಟ್ಟು ನಾನು ಹೇಳುವುದನ್ನು ಕೇಳಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಇದರಲ್ಲೇ ಕಾಲಾಪಹರಣವಾಗುತ್ತಿದೆ.

ಅಧ್ಯಕ್ಷರು : ಕಾಲಾಪಹರಣವಾಗುವುದಿಲ್ಲ. ನೀವು ಎಷ್ಟು ಹೊತ್ತು ಬೇಕೋ ಅಷ್ಟು ಮಾತನಾಡಿ. If you want two hours, I will give two hours.

Sri P.G.R. Sindhia : It is not the question of how much time I want. It is the question of how much importance we should give to this issue. It is the question of how much concern we express.

ಅಧ್ಯಕ್ಷರು : ಸಿಂಧ್ಯಾರವರೇ, ನಾನು ಹೇಳುವುದನ್ನು ಕೇಳಿ. ಈಗ ಪ್ರಶ್ನೋತ್ತರ ವೇಳೆ ಇದೆ. ಅದು ಏನಾಗಿದೆ ಎನ್ನುವುದನ್ನು ಹೇಳುವುದಕ್ಕೇ ನೀವು ಬಿಡದಿದ್ದರೆ ಹೇಗೆ? ಏನಾಗಿದೆ ಎಂದರೆ, 10 ಪ್ರಶ್ನೆಗಳಿಗೆ ಉತ್ತರ ಬಂದಿದೆ. ಹತ್ತರಲ್ಲಿ ಆರು ಪ್ರಶ್ನೆಗಳನ್ನು ಕೇಳುವವರು ಇಲ್ಲ. ಮೂರು ಪ್ರಶ್ನೆಗಳಿಗೆ ಉತ್ತರಿಸಬೇಕಾದಂಥ ಎ. ಕೃಷ್ಣಪ್ಪನವರು, ಬಳ್ಳಾರಿಯಲ್ಲಿ ಸುಮಾರು 200 ಗುಡಿಸಲುಗಳು ಸುಟ್ಟು ಹೋಗಿರುವುದರಿಂದ ನಾನು ಅಲ್ಲಿಗೆ ತುರ್ತಾಗಿ ಹೋಗಬೇಕಾಗಿದೆ, ಈ ಬಗ್ಗೆ ಮಾನ್ಯ ಮುಖ್ಯಮಂತ್ರಿಗಳು ಹೇಳಿದ್ದಾರೆ ಎಂದು ನನಗೆ ತಿಳಿಸಿ ಹೋಗಿದ್ದಾರೆ. ಇನ್ನೊಂದು ಪ್ರಶ್ನೆಯನ್ನು ಇಟ್ಟುಕೊಂಡು ನಾವು ಏನು ಮಾಡೋಣ?

ಶ್ರೀ ಎಸ್.ಎಂ. ಕೃಷ್ಣ : ಇನ್ನೂ ಒಂದು ಪ್ರಶ್ನೆಯೋ ಅಥವಾ ಎರಡು ಪ್ರಶ್ನೆಯೋ ಇರಬಹುದು. ಅವುಗಳನ್ನು ಸಾಯಂಕಾಲ ಬೇಕಾದರೆ ತೆಗೆದುಕೊಳ್ಳೋಣ. ಈಗ ಅವರು ಕೊಟ್ಟಿರುವ ಸೂಚನೆಗೆ, ಚರ್ಚೆಗೆ ನಾವು ಸಿದ್ಧರಾಗಿದ್ದೇವೆ. ಅವರು ಪ್ರಾರಂಭ ಮಾಡಬಹುದು.

ಅಧ್ಯಕ್ಷರು : ಆಯಿತು ಚರ್ಚೆ ಮಾಡಿ.

(ಈ ಹಂತದಲ್ಲಿ ಆಡಳಿತ ಪಕ್ಷದ ಸದಸ್ಯರು ಮೇಜು ಕುಟ್ಟಿದ್ದರು)

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾನ್ಯ ಅಧ್ಯಕ್ಷರೇ, ಚಪ್ಪಾಳೆ ತಟ್ಟಿಸಿಕೊಂಡು ಮಾಡುವಂಥ ಕೆಲಸವಲ್ಲ ಇದು. ವಿಷಯದ ಗಾಂಭೀರ್ಯತೆ ಏನು ಎನ್ನುವುದನ್ನು ಮಾನ್ಯ ಗೌರವಾನ್ವಿತ ಸದಸ್ಯರು ಅರ್ಥಮಾಡಿಕೊಳ್ಳಬೇಕು. ಸಂಖ್ಯಾ ಬಲ ಇಲ್ಲದೇ ಇರುವುದರಿಂದ ನಮ್ಮನ್ನು ಬಗ್ಗಿಸುತ್ತೇವೆ ಎನ್ನುವುದಾದಲ್ಲಿ ನಾವು ಯಾರೂ ಬಗ್ಗಲು ಸಾಧ್ಯವಿಲ್ಲ. ಸರ್ಕಾರ ಮಾನ್ಯ ಮುಖ್ಯಮಂತ್ರಿಗಳು ಮತ್ತು ಸಂಬಂಧಪಟ್ಟ ಮಂತ್ರಿಗಳು ಇದರ ಬಗ್ಗೆ ಸ್ಪಂದಿಸಬೇಕು ಎನ್ನುವ ವಿಚಾರದಿಂದ ಇದನ್ನು ನಾವು ಹೇಳುತ್ತಿದ್ದೇವೆ.

(ಈ ಹಂತದಲ್ಲಿ ಆಡಳಿತ ಪಕ್ಷದ ಕೆಲವು ಸದಸ್ಯರು ತಾವು ಕುಳಿತ ಸ್ಥಾನಗಳಿಂದ ಮಾತನಾಡುತ್ತಿದ್ದರು)

ಶ್ರೀ ಪಿ.ಜಿ.ಆರ್. ಸಿಂಧ್ಯ : ಅವರು ನನಗೆ ಅಡ್ಡಿಪಡಿಸುತ್ತಿದ್ದಾರೆ. I am not going to tolerate this kind of..

ಅಧ್ಯಕ್ಷರು : ತಾವು ಪ್ರಾರಂಭ ಮಾಡಿ. ಅವರ ಮಾತು ಪೂರ ಮುಗಿಯುವವರೆಗೆ ನೀವು ಯಾರೂ ಮಾತನಾಡಬೇಡಿ.

ಶ್ರೀ ಪಿ.ಜಿ.ಆರ್. ಸಿಂಧ್ಯ : ಮಾತನಾಡುತ್ತೇವೆ ಎಂದು ಹೇಳಿದರೆ ನೀವು ಏನು ಹೇಳುತ್ತೀರಿ? ನಾಗಪ್ಪನವರ ಕೊಲೆ ಹೇಗಾಯಿತು ಎಂದು ಹಡಗಲಿ ಕ್ಷೇತ್ರಕ್ಕೆ ಬಂದು ಹೇಳಬೇಕೇ?

ಅಧ್ಯಕ್ಷರು : ಮಧ್ಯದಲ್ಲಿ ಏಕೆ ಮಾತನಾಡುತ್ತೀರಿ. ತಮಗೂ ಅವಕಾಶ ಕೊಡುತ್ತೇನೆ. ಮಧ್ಯದಲ್ಲಿ ಮಾತನಾಡಿದರೆ ಪ್ರಯೋಜನವಾಗುವುದಿಲ್ಲ. ತಮ್ಮ ಕಡೆಯಲ್ಲೂ ಸಹಾ ಯಾರ್ಯಾರು ಮಾತನಾಡುತ್ತೀರೋ, ಅವರೆಲ್ಲರಿಗೂ ಅವಕಾಶ ಕೊಡುತ್ತೇನೆ, ಆಗ ಮಾತನಾಡಿ.

2. ನಿಯಮ 69ರ ಮೇರೆಗೆ ಚರ್ಚೆ

ವಿಷಯ : ಮಾಜಿ ಸಚಿವರಾದ ದಿವಂಗತ ಹೆಚ್. ನಾಗಪ್ಪನವರ ಅಪಹರಣ ಮತ್ತು ಅವರ ದುರಂತ ಸಾವಿನ ಬಗ್ಗೆ.

†ಶ್ರೀ ಪಿ.ಜಿ.ಆರ್. ಸಿಂಧ್ಯ (ಕನಕಪುರ) : ಮಾನ್ಯ ಅಧ್ಯಕ್ಷರೇ, ನಮ್ಮ ಪಕ್ಷದವರೆಲ್ಲರೂ ಒಂದು ನಿಲುವಳಿ ಸೂಚನೆಯನ್ನು ಗಮನಕ್ಕೆ ಸಭೆ ಪ್ರಾರಂಭವಾದ ದಿನವೇ ಕಳುಹಿಸಿದ್ದೇವೆ. 23ನೇ ತಾರೀಖು ಅಧಿವೇಶನ ಪ್ರಾರಂಭವಾದಾಗ ನಾವು ಸಂತಾಪ ಸೂಚನೆಯನ್ನು ಮಾಡಿ ಅಂದೇ, ಈ ಚರ್ಚೆಯಾಗಬೇಕು ಎಂದು ರಾಜ್ಯದ ಜನತೆ ಸಹ ಬಯಸಿದ್ದರು. ಆದರೆ ಅವತ್ತು ನೀವು ಒಂದು ಹೊಸಾ ಪ್ರಿಸಿಡೆಂಟನ್ನು ಪ್ರಾರಂಭ ಮಾಡಿದ್ದೀರಿ. ಬಹಳ ದೊಡ್ಡ ಗೌರವವನ್ನು ನಾಗಪ್ಪನವರಿಗೆ ಕೊಡುವ ಹಾಗೆ, ನಾಗಪ್ಪನವರನ್ನು ಕೊಂದ ಮೇಲೆ, ಅವರ ಆತ್ಮಕ್ಕೆ ಶಾಂತಿಯನ್ನು ಕೊರತಕ್ಕಂಥ ನೆಪದಲ್ಲಿ ಈ ಸದನವನ್ನು ಒಂದು ದಿನ ಮುಂದಕ್ಕೆ ಹಾಕಿದ್ದೇವೆ ಎನ್ನುವ ಬಡಾಯಿಯನ್ನು ಸಹ ತಾವು ಹೊಡೆದಿರಿ, ಆಯಿತು. ಅದು ಆದನಂತರ ಎರಡನೇ ದಿನವೂ ಸಭೆ ನಡೆಯಲಿಲ್ಲ. ಮಾನ್ಯ ಅಧ್ಯಕ್ಷರೆ, ಇವತ್ತು ನಾವು ನಿಲುವಳಿ ಸೂಚನೆ ರೂಪದಲ್ಲಿ ಏಕೆ ಕಳುಹಿಸಿದ್ದೇವೆ ಎಂದರೆ ಇಲ್ಲಿ ಬಹಳ ಜನ ಅತಿರಥ ಮಹಾರಥರುಗಳು, ಮುಂದಿನ ಸಾಲಿನಲ್ಲಿ ಕುಳಿತಿರತಕ್ಕಂಥವರು ಸಂಸದೀಯ ವ್ಯವಸ್ಥೆಯಲ್ಲಿ 30-40 ವರ್ಷದ ಅನುಭವ ಪಡೆದಿರತಕ್ಕಂಥವರು ಇದ್ದಾರೆ. ಆದರೆ ಇವರಿಗೇ ಈ ಗತಿ ಆದಾಗ ಮುಂದೆ ಏನಾಗಬಹುದು ಏನೋ ಎನ್ನುವುದನ್ನು ಒಂದು ಕ್ಷಣ ಅಧಿಕಾರದಲ್ಲಿರತಕ್ಕಂಥ ಜನ ಯೋಚನೆ ಮಾಡಬೇಕು. ನಿಮಗೇನಾದರೂ ನಾಗಪ್ಪನವರಿಗೆ ಬಂದಂಥ ದುರ್ಮರಣ, ಆ ಗತಿ ಬಂದರೆ ಏನು ಮಾಡುತ್ತೀರಿ? ನಿಮ್ಮ ಹೆಂಡತಿ ಮಕ್ಕಳು ಏನು ಮಾಡುತ್ತಾರೆ ಎನ್ನುವುದನ್ನು ನೀವು ಸ್ವಲ್ಪ ಯೋಚನೆ ಮಾಡಿಕೊಂಡು ಮಾತನಾಡಬೇಕು, ಸ್ಪಂದಿಸಬೇಕು ಎನ್ನತಕ್ಕಂಥದ್ದು ನನ್ನ ಕಳಕಳಿಯ ಮನವಿ. ಇಷ್ಟೆಲ್ಲಾ ಆದಮೇಲೆ ಇವತ್ತು ಇಡೀ ರಾಜ್ಯ ಗೊಂದಲದಲ್ಲಿ ಇದೆ, ಇಡೀ ರಾಷ್ಟ್ರ ಗೊಂದಲದಲ್ಲಿ ಇದೆ. ಇವತ್ತು ಅನೇಕ ಅನುಮಾನಗಳು ಇವೆ, ಶಂಕೆಗಳು ಇವೆ. ಈ ಅಧಿವೇಶನ ಕರೆದಾಗಲೂ ಸಹಿತ ನಾಗಪ್ಪನವರ ಅಪಹರಣದ ಸಂದರ್ಭದಲ್ಲಿ ನಡೆದಂಥ ನಡವಳಿಕೆಗಳು, ಅವರ ಬಿಡುಗಡೆ ಆಗುವುದಕ್ಕೆ ಆದಂಥ ಗೊಂದಲಗಳು, ಆ ನಂತರ